**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. :198/2019** **ದಿನಾಂಕಃ 27.07.2026**
**ಸಿ ಡಬ್ಲೂ : 1**
**ಪಿ ಡಬ್ಲೂ : 1**

---

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**
****

**<u>ಮುಂದುವರೆದ ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಆರೋಪಿತರು ಗಲಾಟೆಯಲ್ಲಿ ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಚಾಕುವನ್ನು ನೋಡಿ ಸಾಕ್ಷಿ ಅದೇ ಇರಬಹುದು ಬಹಳ ದಿನವಾಗಿದ್ದರಿಂದ ನನಗೆ ಕರಾರುವಕ್ಕಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಚಾಕುವನ್ನು ಮು ಮಾ 1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ . ಕೆ ಹೆಚ್ ಎ ವಕೀಲರಿಂದಃ</u>**

ನಾನು 10ನೇ ತರಗತಿವರೆಗೂ ಓದಿರುತ್ತೇನೆ. ದೂರನ್ನು ಪೊಲೀಸ ಠಾಣೆಯಲ್ಲಿ ಟೈಪ ಮಾಡಲಾಗಿರುತ್ತದೆ. ನಾನು ನೀಡಿದ ಮಾಹಿತಿಯಂತೆ ನಿಪಿ 1 ದೂರನ್ನು ಟೈಪ ಮಾಡಲಾಗಿರುತ್ತದೆ.ದೂರನ್ನು ಯಾರು ಟೈಪ ಮಾಡಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ದೂರನ್ನು ನೀಡಲು ನಾನು , ನನ್ನ ಮಗ, ನನ್ನ ಹೆಂಡತಿ ಹೋಗಿರುತ್ತೇವೆ. ನನ್ನ ಹೆಂಡತಿ ಅಂಗವಿಕಲೆ ಇರುತ್ತಾಳೆ ಎಂದರೆ ಸರಿಯಲ್ಲ. ಅವಳ ಆರೋಗ್ಯದಲ್ಲಿ ಸ್ವಲ್ಪ ಏರು ಪೇರು ಇದೆ ಎಂದು ಹೇಳುತ್ತಾರೆ. ನಾನು ಟೇಲರಿಂಗ ವೃತ್ತಿಯನ್ನು ಮಾಡುತ್ತೇನೆ ಎಂದರೆ ಸರಿ . ನಾನು ಬಾಡಿಗೆ ಇದ್ದ ಮನೆ 1ನೇ ಆರೋಪಿತನ ಸ್ವಂತ ಮನೆ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಆದರೆ ಸಾಕ್ಷಿ ಮುಂದುವರೆದು 1ನೇ ಆರೋಪಿತ ನನಗೆ ಬಾಡಿಗೆ ಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ಬಾಡಿಗೆ ಹಣವನ್ನು 1ನೇ ಆರೋಪಿಗೆ ನೀಡುತ್ತಿದ್ದೆ. ಬಾಡಿಗೆ ಹಣವನ್ನು ನಗದು ರೂಪದಲ್ಲಿ ನೀಡುತ್ತಿದ್ದೆ. 1 ಮತ್ತು 4ನೇ ಆರೋಪಿತರು ಲಕ್ಷ್ಮಿ ನಾರಾಯಣ

ನಗರದಲ್ಲಿರಮು ಕಟ್ಟಡದಲ್ಲಿ ಬಾಡಿಗೆ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಾಸಿಸುವ ಕಟ್ಟಡದಲ್ಲಿ 4 ಬ್ಲಾಕಗಳು ಇರುತ್ತವೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ 4 ಬ್ಲಾಕಗಳ ಬಾಗಿಲು ಉತ್ತರಕ್ಕೆ ಮುಖ ಮಾಡಿರುತ್ತದೆ ಎಂದರೆ ಸರಿ . ಸದರಿ ಕಟ್ಟಡದ ಪೂರ್ವ ಬಾಜು ವೀವೆಕಾನಂದ ಶಾಲೆ ಮತ್ತು ಆಟದ ಮೈದಾನ ಇರುತ್ತದೆ ಎಂದರೆ ಸರಿ . ಸದರಿ ಮೈದಾನಕ್ಕೆ ಹೊಂದಿಕೊಂಡಂತೆ ಮೈದಾನದ ಪಶ್ಚಿಮಕ್ಕೆ 1ನೇ ಆರೋಪಿತನ ಬಾಡಿಗೆಯಲ್ಲಿರುವ ಮನೆ ಇರುತ್ತದೆ ಎಂದರೆ ಸರಿ . 2ನೇ ಮನೆಯಲ್ಲಿ 4ನೇ ಆರೋಪಿತಳು ಇರುತ್ತಾಳೆ ಎಂದರೆ ಸರಿ . 3ನೇ ಮನೆಯಲ್ಲಿ ನಾನು ಇರುತ್ತೇನೆ ಎಂದರೆ ಸರಿ . 4ನೇ ಮನೆಯಲ್ಲಿ ರಾಜಸ್ಥಾನದಿಂದ ಬಂದಂತಹ ಇಬ್ಬರು ಜನರು ಬಾಡಿಗೆ ಇರುತ್ತಾರೆ ಎಂದೆರ ಸರಿಯಲ್ಲ. ಸಾಕ್ಷಿ ಬೇರೆಯವರು ಇರುತ್ತಾರೆ ಎಂದು ಹೇಳುತ್ತಾರೆ. ನಾನು ವಾಸವಿರುವ ಮನೆಯ ದಕ್ಷಿಣಕ್ಕೆ ಮುನ್ನಾ ಜಾರೆ ರವರ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ಉತ್ತರಕ್ಕೆ ಪಠಾಣ ಎಂಬುವವರ ಮನೆ ಇರುತ್ತದೆ ಎಂದರೆ ಗೊತ್ತಿಲ್ಲ. ನಾವು ವಾಸವಿರುವ ಮನೆಯ ಪಕ್ಕದಲ್ಲಿ ಮೈದಾನ ಇರುವುದರಿಂದ ಸಾಕಷ್ಟು ಜನ ಓಡಾಡುತ್ತಿರುತ್ತಾರೆ ಎಂದರೆ ಮನೆ ಮುಂದೆ ಯಾರೂ ಅಡ್ಡಾಡುವುದಿಲ್ಲ , ಮೈದಾನದಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. 1ನೇ ಆರೋಪಿತನು ತನ್ನ ಮನೆಯ ಪಕ್ಕ ಪಾನಶಾಪ ಹಾಕಿಕೊಂಡಿರುತ್ತಾನೆ ಎಂದರೆ ಸರಿ . ನಾವು ವಾಸವಿರುವ ಮನೆ ಎಲ್ಲ ದಿಕ್ಕೂಗಳಲ್ಲಿ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಮನೆಯಲ್ಲಿ ಗದ್ದಲ ವಾದರೆ ಮತ್ತು ಜೋರು ಬಾಯಿ ಕೇಳಿಸಿದರೆ ಪಕ್ಕದ ಜನರು ಸೇರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಚಾಕುವಿನಿಂದ ಹಲ್ಲೆ ಮಾಡಿದಾಗ ನನಗೆ ರಕ್ತಗಾಯವಾಗಿರುತ್ತದೆ. ಸದರಿ ರಕ್ತ ನನ್ನ ಬಟ್ಟೆಯ ಮೇಲೆ ಬಿದ್ದಿತ್ತು. ಸದರಿ ಬಟ್ಟೆಯನ್ನು ಪೊಲೀಸರಿಗೆ ನೀಡಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.